

## ಉದ್ದ ಕೊಕ್ಕಿನ ಅಂದದ ಮರಕುಟಿಕ

ಮರಕುಟಿಕಗಳನ್ನು ನೋಡದವರಾರು? ತೆಂಗಿನ ಮರ, ಪಪ್ಪಾಯಿ, ಮಾವಿನ ಮರಗಳಲ್ಲಿ ಸದಾ ಕಟ ಕಟ ಕುಟ್ಟುತ್ತಿರುವ ಮರಕುಟಿಕಗಳನ್ನು ನೋಡಿ ಅದರ ಆಕರ್ಷಕ ಬಣ್ಣಕ್ಕೆ ಮಾರುಹೋಗಿರುತ್ತೇವೆ. ಮರಕುಟಿಕಗಳು ಪಿಸಿಡೇ ಕುಟುಂಬಕ್ಕೆ ಸೇರಿವೆ. ಇದರಲ್ಲಿ 200ಕ್ಕಿಂತ ಹೆಚ್ಚು ಪ್ರಭೇದಗಳಿವೆ. ದೇಹದ ಬಣ್ಣವು ಕಪ್ಪು, ಬಿಳಿ, ಕೆಂಪು, ತಿಳಿ ಹಳದಿ ಮತ್ತು ಹಸಿರು ಬಣ್ಣದಿಂದ ಕೂಡಿರುತ್ತದೆ. ತಲೆಯ ಮೇಲ್ಭಾಗದಲ್ಲಿ ಬಣ್ಣದ ಪುಕ್ಕಗಳಿರುತ್ತವೆ. ಉದ್ದನೆಯ ಗಟ್ಟಿಮುಟ್ಟಾದ ಕೊಕ್ಕು, ಹರಿತವಾದ ಉಗುರುಗಳುಳ್ಳ ಕಾಲುಗಳು ಕಾಂಡದ ತೊಗಟೆಯಲ್ಲಿರುವ ಕ್ರಿಮಿ ಕೀಟಗಳನ್ನು ಕುಟ್ಟಿ ಕುಟ್ಟಿ ಭಕ್ಷಿಸಲು ಅನುಕೂಲವಾಗಿವೆ. ನಿಮಿಷಕ್ಕೆ 120 ಕ್ಕಿಂತಲೂ ಹೆಚ್ಚು ಬಾರಿ ಮರವನ್ನು ಕುಟ್ಟುವಂತೆ ರಚಿತವಾಗಿರುವ ತಲೆಬುರುಡೆಯೂ ಕಾರಣವಾಗಿದೆ. ಇವು ಕರ್ಕಶವಾಗಿ ಕೂಗು ಹಾಕುತ್ತವೆ. ಆಸ್ಟ್ರೇಲಿಯಾ, ಮಡಗಾಸ್ಕರ್, ನ್ಯೂಜಿಲ್ಯಾಂಡಿನ ಕೆಲವು ಭಾಗಗಳಲ್ಲಿ ಮತ್ತು ಧ್ರುವ ಪ್ರದೇಶಗಳಲ್ಲಿ ಕಂಡುಬರುವುದಿಲ್ಲ. ಸಣ್ಣ ಕೀಟಗಳು, ಬೀಜಗಳು ಹಾಗೂ ಹಣ್ಣುಗಳನ್ನು ತಿನ್ನುತ್ತವೆ. ಒಂದು ಸಲಕ್ಕೆ ನಾಲ್ಕರಿಂದ ಎಂಟು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು 10 ರಿಂದ 14 ದಿನಗಳಲ್ಲಿ ಪ್ರೌಢಾವಸ್ಥೆಯನ್ನು ತಲುಪುತ್ತವೆ. ಎರಡು ತಿಂಗಳಲ್ಲಿ ಗೂಡು ಬಿಟ್ಟು ಸ್ವತಂತ್ರವಾಗಿ ಹಾರಿಹೋಗುತ್ತವೆ.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು



## ಏರೊಪ್ಲೇನ್ ಚಿಟ್ಟೆ

ಕರಾವಳಿಯ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿರುವ ಬೆಳ್ತಂಗಡಿಯ ನಮ್ಮ ಮನೆಯ ಸುತ್ತ ಪ್ರತೀ ವರ್ಷದಂತೆ ಅಕ್ಟೋಬರ್ ಮಧ್ಯ ಭಾಗದಲ್ಲಿ ಏರೊಪ್ಲೇನ್ ಚಿಟ್ಟೆಗಳು ಕಂಡು ಬಂದವು. ಪ್ರತೀ ವರ್ಷ ಇವುಗಳು ದೀಪಾವಳಿಯ ಹಬ್ಬದ ಮುನ್ನ ಕಂಡು ಬರುವುದು ವಾಡಿಕೆ. ಹತ್ತು ಹದಿನೈದು ವರ್ಷದ ಹಿಂದೆ ಈ ಏರೊಪ್ಲೇನ್ ಚಿಟ್ಟೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದವು. ಈಗ ಇವುಗಳ ಸಂಖ್ಯೆ ಸ್ವಲ್ಪ ಕಡಿಮೆ ಆಗಿದೆ ಎನ್ನಬಹುದು.

ಏರೊಪ್ಲೇನ್ ಚಿಟ್ಟೆಗಳು 6–7 ವಾರಗಳ ಕಾಲ ಬದುಕುತ್ತವೆ. ಗಂಡು ಚಿಟ್ಟೆಗಳು ತಮ್ಮದೇ ಆದ ಆವಾಸ ಹೊಂದಿದ್ದು, ಅಲ್ಲಿಗೆ ಬೇರೆ ಗಂಡು ಚಿಟ್ಟೆಗಳಿಗೆ ಬರಲು ಅವಕಾಶ ನೀಡುವುದಿಲ್ಲ. ಮೊಟ್ಟೆ ಇಡುವ ವೇಳೆ ಗಂಡು ಚಿಟ್ಟೆ ಹೆಣ್ಣನ್ನು ಹೊತ್ತುಕೊಂಡು ಅಥವಾ ಜೊತೆಗೆ ತೇವ ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತದೆ ಎಂದು ಕೀಟತಜ್ಞರು ಹೇಳುತ್ತಾರೆ.

ಒಂದೆರಡು ದಶಕದ ಹಿಂದೆ ಮಕ್ಕಳಿಗೆ ಓದಲು ಹೆಚ್ಚಿನ ಒತ್ತಡ ಇರಲಿಲ್ಲ. ಅಕ್ಟೋಬರ್ ತಿಂಗಳಿನಲ್ಲಿ ಶಾಲೆಗೆ ಒಂದು ತಿಂಗಳು ರಜೆ ಇರುತ್ತಿತ್ತು. ಆಗ ಧಾರಾಳವಾಗಿ ಕಂಡು ಬರುತ್ತಿದ್ದ ಕೆಂಪು, ನೀಲಿ, ಹಸಿರು ಬಣ್ಣದ ಚಿಟ್ಟೆಗಳ ದೇಹದ ಉದ್ದನೆಯ ಭಾಗಕ್ಕೆ ಮಕ್ಕಳು ಗೊತ್ತಾಗದ ಹಾಗೆ ಹಿಂದಿನಿಂದ ದಾರ ಬಿಗಿಯುತ್ತಿದ್ದರು. ಚಿಟ್ಟೆ ಹಾರಿದಾಗ ಉದ್ದನೆಯ ದಾರ ಅದರ ಜೊತೆ ಹಾರುವುದನ್ನು ಕಂಡು ಖುಷಿ ಪಡುತ್ತಿದ್ದರು. ದಾರ ಬಿಗಿದ ಚಿಟ್ಟೆಗಳು ಬಳಿಕ ಏನಾಗುತ್ತಿದ್ದವು ಎನ್ನುವುದು ಗೊತ್ತಿಲ್ಲ. ಮಕ್ಕಳು ಈಗ ಈ ರೀತಿ ಮಾಡುವುದು ಕಣ್ಣಿಗೆ ಬೀಳುತ್ತಿಲ್ಲ ಎನ್ನುವುದು ಖುಷಿಯ ವಿಚಾರವಾಗಿದೆ.

–ಅರುಣ್ ಕಿಲ್ಲೂರು



## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly